ವೈದ್ಯರ ಹುದ್ದೆಗಳು

3302 (3628); ಶ್ರೀ ಶಿವಾನಂದ ಎಸ್. ಪಾಟೀಲ (ಬಸವನಬಾಗೇವಾಡಿ)

ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಎಷ್ಟು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಿದೆ (ವಿವರಗಳನ್ನು ನೀಡುವುದು).

ಆ) ರಾಜ್ಯ ಸರ್ಕಾರವು ಅನುಮೋದನೆ ಮಾಡಿದ ಎಲ್ಲಾ ಕಾಲೇಜುಗಳಿಗೆ ಎಂ.ಸಿ.ಐ ಒಪ್ಪಿಗೆ ನೀಡಿದೆಯೇ? ಪ್ರತಿ ಕಾಲೇಜಿಗೆ ನಿಗದಿಯಾಗಿರುವ ಸೀಟುಗಳೆಷ್ಟು?

ಇ) ಪ್ರತಿ ವರ್ಷ ಎಷ್ಟು ಜನ ಎಂ.ಬಿ.ಬಿ.ಎಸ್ ಸ್ನಾತಕೋತ್ತರ ಪದವಿ ಪಡೆದವರು ಹಾಗೂ ವಿಶೇಷ ತಜ್ಞರು (Super Speciality) ಕಾಲೇಜುಗಳಿಂದ ಹೊರ ಬರುತ್ತಾರೆ?

ಈ) ಹೊಸ ಕಾನೂನಿನ ಪ್ರಕಾರ ಇವರುಗಳಿಗೆ ಎಷ್ಟು ವರ್ಷಗಳ ಗ್ರಾಮೀಣ ಸೇವೆಯನ್ನು ನಿಗಧಿಪಡಿಸಲಾಗಿದೆ?

ಉ) ವೈದ್ಯಕೀಯ ಶಿಕ್ಷಣ ಇಲಾಖೆಗೆ ಯಾವ ಆಸ್ಪತ್ರೆಗಳು ಸೇರುತ್ತವೆ? ಈ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ಭರ್ತಿ ಮಾಡಲು ಏನು ಕ್ರಮ ಕೈಗೊಳ್ಳಲಾಗುವುದು?

ಡಾ॥ ಶರಣಪ್ರಕಾಶ ಆರ್. ಪಾಟೀಲ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ಕೊಪ್ಪಳ, ಗದಗ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು 2015–16ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಭಾರತೀಯ ವೈದ್ಯಕೀಯ ಪರಿಷತ್ತು (ಎಂ.ಸಿ.ಐ) ಅನುಮತಿ ನೀಡಿದ್ದು, ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳಲಾಗಿದೆ.

ಆ) ರಾಜ್ಯದಲ್ಲಿ ಒಟ್ಟು 13 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಎಂ.ಸಿ.ಐ ಒಪ್ಪಿಗೆ ನೀಡಿದೆ. ಈ ಕಾಲೇಜಿಗೆ ನಿಗಧಿಯಾಗಿರುವ ಸೀಟುಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ. ಸಂ	ಕಾಲೇಜಿನ ಹೆಸರು	ಸೀಟುಗಳು
1	ಬಿ.ಎಂ.ಸಿ & ಆರ್.ಐ, ಬೆಂಗಳೂರು	250
2	ಎಂ.ಎಂ.ಸಿ & ಆರ್.ಐ, ಮೈಸೂರು	150
3	ಕಿಮ್ಸ್, ಹುಬ್ಬಳ್ಳಿ	150
4	ವಿಮ್ಸ್, ಬಳ್ಳಾರಿ	150
5	ಶಿಮ್ಸ್, ಶಿವಮೊಗ್ಗ	100
6	ಮಿಮ್ಸ್, ಮಂಡ್ಯ	100
7	ಹಿಮ್ಸ್, ಹಾಸನ	100
8	ರಿಮ್ಸ್, ರಾಯಚೂರು	100
9	ಬಿಮ್ಸ್, ಬೆಳಗಾವಿ	100
10	ಬ್ರಿಮ್ಸ್, ಬೀದರ್	100
11	ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ	150
12	ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗುಲ್ಬರ್ಗಾ	150
13	ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ	150

ಕಾರವಾರ, ಕೊಡಗು ಮತ್ತು ಚಾಮರಾಜನಗರ ವೈದ್ಯಕೀಯ ಕಾಲೇಜುಗಳಿಗೆ ಎಂಸಿಐ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಇ) ಪ್ರಸ್ತುತ ವರ್ಷದಲ್ಲಿ ಸುಮಾರು 3149 ಎಂಬಿಬಿಎಸ್ ಪದವಿ ಪಡೆದವರು, 1392 ಸ್ನಾತಕೋತ್ತರ ಪದವಿ ಮತ್ತು 382 ಸ್ನಾತಕೋತ್ತರ ಡಿಪ್ಲೋಮೊ ಪದವಿ ಹಾಗೂ 107 ವಿಶೇಷ ತಜ್ಞರು (ಸೂಪರ್ ಸ್ಪೆಷಾಲಿಟಿ) ಪದವಿ ಪಡೆದ ವೈದ್ಯರುಗಳು ಕಾಲೇಜುಗಳಿಂದ ಹೊರಬರುತ್ತಾರೆ.

ಈ) ಹೊಸ ಕಾನೂನಿನ ಪ್ರಕಾರ ಎಂಬಿಬಿಎಸ್ ಪದವೀಧರರಿಗೆ ಒಂದು ವರ್ಷ ಗ್ರಾಮೀಣ ಸೇವೆಯನ್ನು ಹಾಗೂ ಸ್ನಾತಕೋತ್ತರ ಪದವೀಧರರಿಗೆ ಒಂದು ವರ್ಷ ಸರ್ಕಾರಿ ಸೇವೆಯನ್ನು ನಿಗದಿಪಡಿಸಲಾಗಿದೆ.

ಉ) ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ. ಖಾಲಿ ಇರುವ ಬೋಧಕ ಹುದ್ದೆಗಳನ್ನು ಎಂಸಿಐ ಮಾರ್ಗಸೂಚಿಗಳನ್ವಯ ನೇರ ಸಂದರ್ಶನದ ಮೂಲಕ ಕಾಲಕಾಲಕ್ಕೆ ಭರ್ತಿ ಮಾಡಲಾಗುವುದು. ಬೋಧಕೇತರ ಹುದ್ದೆಗಳನ್ನು ಈಗಾಗಲೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸಲ್ಪಡುವ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ.

ಅನುಬಂಧ-1

ವೈದ್ಯಕೀಯ ಶಿಕ್ಷಣ ಇಲಾಖೆಗೆ ಸೇರುವ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರ

ಕ್ರ.ಸಂ	ಕಾರ್ಯಾಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಹೆಸರು	ಅಧೀನ ಆಸ್ಪತ್ರೆಗಳ ಹೆಸರು	ಖಾಲಿ ಇರುವ ಹುದ್ದೆಗಳು
1	ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಬೆಂಗಳೂರು.	ವಿಕ್ಟೋರಿಯ ಆಸ್ಪತ್ರೆ	1064
		ಬೌರಿಂಗ್ ಆಸ್ಪತ್ರೆ	
		ಮಾಣಿವಿಲಾಸ ಆಸ್ಪತ್ರೆ	
		ಮಿಂಟೋ ಆಸ್ಪತ್ರೆ	
		ಪಿಎಂಎಸ್ಎಸ್ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ	
2.	ಮೈಸೂರು ವೈದ್ಯಕೀಯ-ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮೈಸೂರು.	ಕೆ.ಆರ್.ಆಸ್ಪತ್ರೆ	620
		ಜಲುವಾಂಬ ಆಸ್ಪತ್ರೆ	
		ಪಿಕೆಟಿಬಿ ಆಸ್ಪತ್ರೆ	
3.	ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ	ಕಿಮ್ಸ್ ಆಸ್ಪತ್ರೆ	912

4.	ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ.	ವಿಮ್ಸ್ ಆಸ್ಪತ್ರೆ ಜಿಲ್ಲಾ ಆಸ್ಪತ್ರೆ ಟಿಬಿ ಸ್ಯಾನಿಟೋರಿಯಂ	798
5.	ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ, ಮಂಡ್ಯ.	ಜಿಲ್ಲಾ ಆಸ್ಪತ್ರೆ ಮಂಡ್ಯ	54
6.	ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಸನ.	ಜಿಲ್ಲಾ ಆಸ್ಪತ್ರೆ, ಹಾಸನ	204
7.	ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ, ಶಿವಮೊಗ್ಗ.	ಮೆಗ್ಗಾನ್ ಜಿಲ್ಲಾ ಆಸ್ಪತ್ರೆ, ಶಿವಮೊಗ್ಗ	234
8.	ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೀದರ್	ಜಿಲ್ಲಾ ಆಸ್ಪತ್ರೆ, ಬೀದರ್	159
9.	ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು.	ಜಿಲ್ಲಾ ಆಸ್ಪತ್ರೆ, ರಾಯಚೂರು. ಓಪೆಕ್ ಆಸ್ಪತ್ರೆರಾಯಚೂರು	180
10	ಬೆಳಗಾಂ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾಂ.	ಜಿಲ್ಲಾ ಆಸ್ಪತ್ರೆ-ಬೆಳಗಾಂ.	211

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು			
1.	ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು	ಕ್ಯಾನ್ಸರ್ ಆಸ್ಪತ್ರೆ, ಬೆಂಗಳೂರು	330
2.	ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.	-	93
3.	ಇಂದಿರಾಗಾಂಧಿ ಮಕ್ಕಳ ಚಿಕಿತ್ಸಾ ಸಂಸ್ಥೆ, ಬೆಂಗಳೂರು	-	116
4.	ನೆಮ್ಹೋ ಯೂರಾಲಜಿ, ಬೆಂಗಳೂರು.	-	1580
5.	ಎಸ್.ಡಿ.ಎಸ್.ಶ್ಚಯ ರೋಗ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.	-	249
6.	ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಧಾರವಾಡ.	ಮಾನಸಿಕ ಆಸ್ಪತ್ರೆ ಧಾರವಾಡ	175